ಎಲ್ಲಿ ಆ ಕಾಗದವನ್ನು ತೆಗೆದುಕೊಂಡು ಹೋಗಿದ್ದಲ್ಲ? ಅದು ಏನಾಯ್ತು?' ಅದಕ್ಕೆ ಕಪ್ಪೆ ಉತ್ತರಿಸಿತು:'ಪ್ರಭು, ಆ ಕಾಗದವನ್ನು ತಲುಪಿಸಿದ್ದೇನೆ. ಆದರೆ ಅವರು ಅದಕ್ಕೆ ಇನ್ನೂ ಏನೂ ಮರು ಉತ್ತರ ನೀಡಿಲ್ಲ'.

'ಏ, ಮನುಷ್ಯಾ! ನೀನು ಸುಳ್ಳು ಹೇಳ್ತಾ ಇದ್ದೀ. ನೀನು ಅಲ್ಲಿಗೆ ಹೋಗಿಲ್ಲ ಬಿಡು' ಅಂದ ಕಿಮನ್ಯೂಜ್‌ನ ಮಗ.

ಅದಕ್ಕೆ ಕಪ್ಪೆ ಹೇಳಿತು:'ಪ್ರಭೂ, ನಾನು ಅದೇ ಸ್ಥಳಕ್ಕೆ ಹೋಗಿದ್ದೆ. ನೀನೇ ಮುಂದೊಂದು ದಿನ ಅದನ್ನು ನೋಡ್ತೀಯೆ ಇರು' ಎಂದಿತು.

ಇದಾದ ಆರು ದಿನಗಳ ನಂತರ ಕಿಮನ್ಯೂಜ್‌ನ ಮಗ ಮತ್ತೆ ಒಂದು ಕಾಗದ ಬರೆದು ತನ್ನ ಹಿಂದಿನ ಕಾಗದದ ಬಗ್ಗೆ ಕೇಳಿದ್ದ: 'ಲಾರ್ಡ್ ಸೂರ್ಯ ಮತ್ತು ಲೇಡಿ ಚಂದ್ರಮ ಅವರೇ, ನಾನು ನಿಮಗೆ ಒಂದು ಕಾಗದ ಬರೆದಿದ್ದೆ, ನನ್ನ ಆ ಕಾಗದ ನಿಮಗೆ ತಲುಪಿದೆ. ಆದರೆ ಅದಕ್ಕೆ ನಿಮ್ಮಿಂದ ಇನ್ನೂ ಉತ್ತರ ಇಲ್ಲ. ಏನಾರ ನೀವು ನನ್ನ ಬೇಡಿಕೆಯನ್ನು ಸ್ವೀಕರಿಸಿದ್ದೀರಾ? ಅಥವಾ ನನ್ನ ಬೇಡಿಕೆಯನ್ನು ನೀವು ತಿರಸ್ಕರಿಸಿದ್ದೀರಾ ಎಂಬುದನ್ನು ಹೇಳಿ' ಎಂದು ಬರೆದ ಈ ಕಾಗದವನ್ನು ಮಡಿಚಿದ ನಂತರ ಕಪ್ಪೆಯನ್ನು ಕರೆದು ಅದರ ಕೈಯಲ್ಲಿ ಕೊಟ್ಟು ಕಳಿಸಿದ. ಕಪ್ಪೆ ಅದನ್ನು ತನ್ನ ಬಾಯಿಂದ ಬಿಗಿಯಾಗಿ ಕಚ್ಚಿಕೊಂಡು ಅಲ್ಲಿಂದ ಹೊರಟು ಆ ಬಾವಿಯೊಳಕ್ಕೆ ಬಂದಿತು. ಬಂದ ಕಪ್ಪೆ ನೀರಿನ ತಳದಲ್ಲಿ ಕ್ಷೇಮವಾಗಿ ಕುಳಿತಿತು.

ಅನಂತರ ಎಂದಿನಂತೆ ಆಗಸದಿಂದ ಆ ಹುಡುಗಿಯರು ನೀರು ತೆಗೆದುಕೊಂಡು ಹೋಗಲು ಭೂಮಿಯ ಮೇಲಿದ್ದ ಆ ಬಾವಿಗೆ ಬಂದರು. ಬಾವಿಯೊಳಕ್ಕೆ ತಮ್ಮ ಕೊಡಗಳನ್ನು ಬಿಟ್ಟು ನೀರನ್ನು ಮೊಗೆದುಕೊಂಡರು. ಆಗ ಆ ಕಪ್ಪೆ ಬಂದು ಕೊಡದೊಳಗೆ ಹೋಗಿ ಕುಳಿತಿತು. ನಂತರ ಆ ಹುಡುಗಿಯರು ಕೊಡಗಳನ್ನು ಹೊತ್ತುಕೊಂಡು ಆಗಸದಿಂದ ಭೂಮಿಯವರೆಗೆ ಜೇಡ ಕಟ್ಟಿದ್ದ ಅದೇ ಬಲೆಯ ದಾರದ ಮೂಲಕ ಹತ್ತಿ ಆಕಾಶಕ್ಕೆ ಮರಳಿದರು. ಅವರು ಹೊತ್ತು ತಂದ ಆ ನೀರಿನ ಕೊಡಗಳನ್ನು ಎಂದಿನಂತೆ ಆ ಕೋಣೆಯಲ್ಲಿ ಇಟ್ಟು ಹೊರಟು ಹೋದರು. ಆಗ ಕೊಡವೊಂದರಲ್ಲಿದ್ದ ಕಪ್ಪೆ ಹೊರಗೆ ಬಂದು, ತಾನು ತಂದಿದ್ದ ಕಾಗದವನ್ನು ಅಲ್ಲಿದ್ದ ಮೇಜಿನ ಮೇಲೆ ಇಟ್ಟು ಕೋಣೆಯ ಮೂಲೆಗೆ ಹೋಗಿ ಅಡಗಿ ಕುಳಿತಿತು.

ತರುವಾಯ ಎಂದಿನಂತೆ ಸೂರ್ಯದೇವ ಆ ಕೋಣೆಗೆ ಬಂದ. ನೀರಿನ ಕೊಡಗಳನ್ನೂ ಮೇಜಿನ ಮೇಲಿದ್ದ ಕಾಗದವನ್ನೂ ನೋಡಿದ. ಆ ಕಾಗದವನ್ನು ಕೈಗೆತ್ತಿಕೊಂಡು ಅದನ್ನು ತೆರೆದು ಓದಿದ. ಆ ಕಾಗದದ ಒಕ್ಕಣೆ ಹೀಗಿತ್ತು: 'ನಾನು ಕಿಮನ್ಯೂಜ್‌ನ ಮಗ. ಸೂರ್ಯದೇವರೇ, ನನ್ನ ಹಿಂದಿನ ಕಾಗದಕ್ಕೆ ಸಂಬಂಧಿಸಿದಂತೆ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಏನೆಂದರೆ ನೀವು ನನ್ನ ಹಿಂದಿನ ಆ ಕಾಗದಕ್ಕೆ ಇದುವರೆಗೂ ಯಾಕೆ ಒಂದು ಉತ್ತರವನ್ನೂ ಕೊಟ್ಟೇ ಇಲ್ಲ' ಎಂದು.

ಅದನ್ನು ಓದಿದ ಸೂರ್ಯದೇವ ಕೂಡಲೇ ಆ ಹುಡುಗಿಯರನ್ನು ಕರೆದು, 'ಹುಡುಗಿಯರೇ, ನೀವು ಯಾವಾಗಲೂ ನೀರನ್ನು ತರಲು ಭೂಮಿಗೆ ಹೋಗುತ್ತಿದ್ದೀರಿ. ಏನಾದರೂ ನೀವು ಈ ಕಾಗದವನ್ನು ತಂದಿರಾ?' ಎಂದು ಕೇಳಿದನು.

'ನಾವು! ಪ್ರಭು? ಇಲ್ಲ' ಎಂದು ಆ ಹುಡುಗಿಯರು ಹೇಳಿದರು. ಆದರೂ ಸೂರ್ಯದೇವ ಅನುಮಾನದಿಂದಲೇ ಆ ಕಾಗದವನ್ನು ಪೆಟ್ಟಿಗೆಗೆ ಇಟ್ಟು ಕಿಮನ್ಯೂಜ್‌ನ ಮಗನಿಗೆ ಒಂದು ಕಾಗದವನ್ನು ಬರೆದ: 'ನೀನು ಯಾರ ಮೂಲಕವೋ ನನಗೆ ನನ್ನ ಮಗಳನ್ನು ನೀನು ಮದುವೆಯಾಗುವ ಬಗ್ಗೆ ಕೇಳಿ ಕಾಗದವನ್ನು ಕಳಿಸಿದ್ದೀಯೆ. ಇದಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ಇದಕ್ಕೆ ನನ್ನ ಒಂದು ಷರತ್ತು ಇದೆ. ಅದೇನೆಂದರೆ, ಯಾವ ಮನುಷ್ಯ ಈ ಕಾಗದ ಬರೆದಿದ್ದಾನೋ, ಆ ಮನುಷ್ಯ ಖುದ್ದಾಗಿ ನನ್ನ ಮುಂದೆ ಬಂದು ಹಾಜರಾಗಬೇಕು. ಅದರಿಂದ ನೀನು ನನಗೆ ಗೊತ್ತಾಗಬೇಕು'.

ಹೀಗೆ ಬರೆದ ಈ ಕಾಗದವನ್ನು ಮಡಚಿ ತನ್ನ ಮೇಜಿನ ಮೇಲೆ ಇಟ್ಟು ಅತ್ತ ಹೋದನು. ಆಗ ಕಪ್ಪೆಯು ತಾನು ಅಡಗಿಕೊಂಡಿದ್ದ ಮೂಲೆಯಿಂದ ಮೆಲ್ಲಗೆ ಬಂದು ಆ ಕಾಗದವನ್ನು ತೆಗೆದುಕೊಂಡಿತು. ನಂತರ ಅದು ಅಲ್ಲೇ ಇದ್ದ ಒಂದು ಖಾಲಿ ಕೊಡದೊಳಗೆ ಹೋಗಿ ತಣ್ಣಗೆ ಕುಳಿತುಕೊಂಡು ಬಿಟ್ಟಿತು.

ಸ್ವಲ್ಪ ಸಮಯದ ನಂತರ ಖಾಲಿಯಾಗಿದ್ದ ಕೊಡಗಳನ್ನು ಆ ಹುಡುಗಿಯರು ಎತ್ತಿಕೊಂಡು ನೀರು ತರಲು ಭೂಮಿಯ ಕಡೆಗೆ ಹೊರಟರು. ಅವರು ಅದೇ ಜೇಡನ ಬಲೆಯ ದಾರ ಹಿಡಿದು ಭೂಮಿಗೆ ಬಂದರು.